ಕರ್ನಾಟಕ ಸರ್ಕಾರ

## ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–560001

ಸಂಖ್ಯೆ:ಸಿ3(2)ಪ್ರಾ.ಶಾ.ಶಿ ಹೆ.ಹು.ಸ್ಥ/01/2016–17 ದಿನಾಂಕ: 04/11/2016

'ಅತೀ ತುರ್ತು'

-: ಜ್ಞಾಪನ :-

ವಿಷಯ:– 2016–17 ನೇ ಸಾಲಿನ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಹೆಚ್ಚುವರಿ ಎಂದು ಗುರುತಿಸಿ ಮರು ನಿಯುಕ್ತಿಗೊಳಿಸುವ ಕುರಿತು:

ಉಲ್ಲೇಖ:–ಈ ಕಛೇರಿ ಪತ್ರ ಸಮಸಂಖ್ಯೆ: 2/7/2016 ಮತ್ತು ಸಂಬಂಧಿತ ಸುತ್ತೋಲೆಗಳು

–0–0–0–

ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ 2016–17 ನೇ ಸಾಲಿನಲ್ಲಿ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಆರ್.ಟಿ.ಇ ನಿಯಮಗಳ ನಿಗಧಿ ಇರುವಂತೆ ಮಕ್ಕಳ ಮತ್ತು ಶಿಕ್ಷಕರ ಅನುಪಾತಕ್ಕೆ ತಕ್ಕಂತೆ ಡೈಸ್ ಅಂಕಿ–ಅಂಶವನ್ನು ಪರಿಗಣಿಸಿ ಶಿಕ್ಷಕ ಸಂಪನ್ಮೂಲದ ಸಮರ್ಪಕ ಬಳಕೆಗೆ ಹೆಚ್ಚುವರಿ ಶಿಕ್ಷಕರನ್ನು ಗುರುತಿಸಿ ಅಗತ್ಯತೆ ಇರುವ ಶಾಲೆಗಳಿಗೆ ಮರುನಿಯುಕ್ತಿಗೊಳಿಸುವ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡಲಾಗಿತ್ತು. ಇದಕ್ಕೆ ಸಂಬಂಧಿಸಿದಂತೆ ಶಾಲಾವಾರು ತಃಖ್ತೆಯನ್ನೂ ಸಹ ಸರ್ವಶಿಕ್ಷಣ ಅಭಿಯಾನ ಡೈಸ್ ಶಾಖೆಯಿಂದ ಒದಗಿಸಲಾಗಿತ್ತು.

ಅದರಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಒಟ್ಟು 12393 ಶಿಕ್ಷಕರುಗಳನ್ನು ಡೈಸ್ ಅಂಕಿ ಅಂಶದ ಆಧಾರದ ಮೇಲೆ ಹೆಚ್ಚುವರಿ ಶಿಕ್ಷಕರೆಂದು ಗುರುತಿಸಲಾಗಿದೆ. ಇದರಲ್ಲಿ ಜಿಲ್ಲೆಗಳಿಂದ ಬಂದ ಅಂಕಿ–ಅಂಶದ ಪ್ರಕಾರ ಒಟ್ಟು 10001 ಶಿಕ್ಷಕರುಗಳನ್ನು ಮಾತ್ರ ಕರ್ತವ್ಯದಿಂದ ಬಿಡುಗಡೆ ಮಾಡಿ ಅಗತ್ಯತೆ ಇರುವ ಶಾಲೆಗಳಲ್ಲಿ ಕರ್ತವ್ಯಕ್ಕೆ ಹಾಜರುಪಡಿಸಿದ ಬಗ್ಗೆ ಮಾಹಿತಿ ಇದೆ. ಉಳಿಕೆ 2392 ಶಿಕ್ಷಕರುಗಳನ್ನು ಮರು ನಿಯುಕ್ತಿಗೊಳಿಸಿರುವುದಿಲ್ಲ. ಈ ಅಂಶವನ್ನು ಸರ್ಕಾರದ ಪ್ರಕಾರದ ಪ್ರಧಾನ ಕಾರ್ಯದರ್ಶಿಗಳು ಅತ್ಯಂತ ಗಂಭೀರವಾಗಿ ಪರಿಗಣಿಸಿರುತ್ತಾರೆ.

ತಮ್ಮ ಜಿಲ್ಲೆಯಲ್ಲಿನ ಬಾಕಿ ಉಳಿದಿರುವ ಹೆಚ್ಚುವರಿ ಶಿಕ್ಷರುಗಳು ಮೂಲ ಶಾಲೆಯಲ್ಲಿಯೇ ಹೆಚ್ಚುವರಿಯಾಗಿ ಈ ದಿನದ ವರೆಗೆ ಮುಂದುವರೆದಿರುವುದನ್ನು ಇಲಾಖೆಯು ಅತ್ಯಂತ ಗಂಭೀರವಾಗಿ ಪರಿಗಣಿಸಿದೆ. ಅತ್ಯಂತ ತ್ವರಿತವಾಗಿ ಮರುನಿಯುಕ್ತಿ ಕ್ರಮಗಳನ್ನು ಪೂರೈಸಿ 10/11/2016 ರ ಒಳಗಾಗಿ ವರದಿಯನ್ನು ಸಲ್ಲಿಸಲು ಸೂಚಿಸಿದೆ. ಈಗಾಗಲೇ ಅಂತರ್ ಘಟಕ ವರ್ಗಾವಣಾ ಕೌನ್ಸಿಲಿಂಗ್ ಪ್ರಕ್ರಿಯೆಯು ಪೂರ್ಣಗೊಂಡಿದ್ದು ಸಂಬಂಧಿತ ಅಗತ್ಯ ಹುದ್ದೆಗಳು ಖಾಲಿ ಇರಬಹುದಾಗಿರುತ್ತದೆ. ಸದರಿ ಹುದ್ದೆಗಳಲ್ಲಿಯೂ ಸಹಾ ಅಗತ್ಯತೆಯ ಆಧಾರದ ಮೇಲೆ ಹೆಚ್ಚುವ ಶಿಕ್ಷಕರನ್ನು ನಿಯಮಾನುಸಾರ ಸ್ಥಳನಿಯುಕ್ತಿಗೊಳಿಸಲು ಮತ್ತು ಒಟ್ಟಾರೆಯಾಗಿ ಜಿಲ್ಲೆಯ ಎಲ್ಲಾ ಶಿಕ್ಷಕರುಗಳನ್ನು ಅಗತ್ಯ ಸ್ಥಳಗಳಿಗೆ ಸ್ಥಳ ನಿಯುಕ್ತಿಗೊಳಿಸಿ ಸಂಪನ್ಮೂಲದ ಸಮರ್ಪಕ ಬಳಕೆಗೆ ಕ್ರಮವಹಿಸಿ ವರದಿಯನ್ನು ಸಲ್ಲಿಸತಕ್ಕದ್ದು. ವಿಳಂಬ ದೋರಣೆಯನ್ನು ಕರ್ತವ್ಯಲೋಪ ಎಂಬುದಾಗಿ ಪರಿಗಣಿಸಲಾಗುವುದು.

(ಕೆ. ಆನಂದ)
ನಿರ್ದೇಶಕರು (ಪ್ರಾಥಮಿಕ)

ಗೆ,

ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ತುರ್ತು ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.

: ನಮೂನೆ :

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ಜಿಲ್ಲೆಯಲ್ಲಿನ ಒಟ್ಟು ಹೆಚ್ಚುವರಿ ಶಿಕ್ಷಕರ ಸಂಖ್ಯೆ | ಈಗಾಗಲೇ ಸ್ಥಳನಿಯುಕ್ತಿಗೊಳಿಸಲಾದ ಶಿಕ್ಷಕರ ಸಂಖ್ಯೆ | ಇದೀಗ ಸ್ಥಳ ನಿಯುಕ್ತಿ ಕ್ರಮಗಳನ್ನು ಕೈಗೊಂಡು ಸ್ಥಳ ನಿಯುಕ್ತಿಗೊಳಿಸಲಾದ ಶಿಕ್ಷಕರ ಸಂಖ್ಯೆ | ಬಾಕಿ ಉಳಿದಿರುವ ಶಿಕ್ಷಕರ ಸಂಖ್ಯೆ | ಬಾಕಿ ಉಳಿಯಲು ಕಾರಣ | ಷರಾ |
|---|---|---|---|---|---|---|---|
| | | | | | | | |
| | | | | | | | |

ಉಪನಿರ್ದೇಶಕರ ಸಹಿ

# Status report - Excess Teachers identified-Redeployed/ Relieved as on 19-08-16

| Sl.No. | District | No. of Excess teachers | No. of Teachers relieved |
|---|---|---|---|
| | | 1 | 2 |
| 1 | BANGALORE RURAL | 272 | 257 |
| 2 | BENGALURU U NORTH | 205 | 205 |
| 3 | BENGALURU U SOUTH | 220 | 220 |
| 4 | CHIKKABALLAPURA | 269 | 218 |
| 5 | CHITRADURGA | 606 | 510 |
| 6 | DAVANAGERE | 576 | 526 |
| 7 | KOLAR | 529 | 349 |
| 8 | RAMANAGARA | 360 | 285 |
| 9 | SHIVAMOGGA | 517 | 369 |
| 10 | TUMAKURU | 382 | 361 |
| 11 | TUMAKURU MADHUGIRI | 261 | 256 |
| 12 | MYSORE | 614 | 569 |
| 13 | CHAMARAJANAGARA | 219 | 214 |
| 14 | KODAGU | 166 | 70 |
| 15 | MANDYA | 345 | 314 |
| 16 | HASSAN | 504 | 364 |
| 17 | CHIKKAMAGALUR | 826 | 200 |
| 18 | DAKSHINAKANNADA | 242 | 242 |
| 19 | UDUPI | 184 | 140 |
| 20 | BELGAUM | 561 | 417 |
| 21 | CHIKKODI | 289 | 210 |
| 22 | BAGALKOT | 304 | 281 |
| 23 | VIJAYAPURA | 482 | 482 |
| 24 | DHARWAD | 296 | 251 |
| 25 | GADAG | 207 | 207 |
| 26 | HAVERI | 355 | 317 |
| 27 | UTTARAKANNADA | 365 | 258 |
| 28 | Sirsi | 179 | 179 |
| 29 | Kalaburgi | 548 | 467 |
| 30 | Yadagiri | 81 | 81 |
| 31 | Bidar | 510 | 370 |
| 32 | Bellary | 344 | 289 |
| 33 | Koppala | 224 | 217 |
| 34 | Raichur | 351 | 306 |
| | TOTAL | 12393 | 10001 |